Steps to save ryots on account of Reduction of Prices of Foodgrains

500. Sri G. RAME GOWDA (Doddaballapur).—

Will the Minister of State for Food and Civil Supplies be pleased to state :—

(*a*) whether the Government has thought of stopping importing and distribution of foodgrains in Bangalore District ;

(*b*) whether it has come to the notice of the Government that prices of foodgrains have come down very much ;

(*c*) whether they are aware that the ryots are incurring heavy losses as the production cost of foodgrains is increasing day by day and prices of foodgrains are reducing ;

(*d*) whether it has come to the notice of Government that such a position is discouraging ryots to take up production of foodgrains ;

(*e*) the steps taken by the Government to protect ryots from such position ?

Sri B. VITHALDAS SETTY (Minister of State for food and Civil Supplies).—

(*a*) to (*d*) Except wheat, Government is not importing any foodgrains in sizable quantities. The same policy regarding import and distribution of foodgrains as was followed during last year is continued this year also. It is no doubt true that the prices of foodgrains have come down when compared with the corresponding periods in previous years.

Even though the prices of foodgrains have registered a downward trend, growers are getting an economical return due to increased quantum of production from adoption of improved methods of cultivation.

(*e*) Procurement price of paddy has been increased, by Rs. 2 per quintal. Government have also decided to purchase whatever quantities of paddy and jowar offered by the growers at the procurement prices, namely, Rs. 50 per quintal for coarse paddy and Rs. 52 per quintal for jowar.

ಶ್ರೀ ಜಿ. ರಾಮೇಗೌಡ.—ಈಗ ರೈತರಿಗೆ ಆದುನಿಕ ಪದ್ಧತಿಯಲ್ಲಿ ಬೇಸಾಯ ಮಾಡುವುದರಿಂದ ಲಾಭ ಬರುತ್ತದೆಂದು ತಾವು ಹೇಳಿದ್ದೀರಿ. ತಾವು ಬೆಂಗಳೂರು ಜಿಲ್ಲೆಯ ಆಹಾರಪದಾರ್ಥಗಳ ಪ್ರೊಡಕ್ಷನ್ ಕಾಸ್ಟ್ ಕಂಡುಹಿಡಿದಿದ್ದೀರಾ ?

† ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಬೆಂಗಳೂರು ನಗರದಲ್ಲಿ ಆಹಾರಪದಾರ್ಥಗಳು ಪ್ರೊಡಕ್ಷನ್ ಆಗುವುದಿಲ್ಲ. ಉಳಿದ ಪ್ರದೇಶಗಳಲ್ಲಿ ಕಂಡುಹಿಡಿದಿದ್ದೇವೆ.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ಅಲ್ಲದೆ ಬೇರೆ ಎಲ್ಲಿಯಾದರೂ ಗೋಧಿ, ಭತ್ತ, ರಾಗಿ, ಇವುಗಳಿಗೆ ಪ್ರೊಡಕ್ಷನ್ ಕಾಸ್ಟ್ ಎಷ್ಟಾಗಿದೆ ?

ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಸಂಬಂಧಪಟ್ಟ ತಜ್ಞರು ಅದನ್ನು ಕಂಡುಹಿಡಿದಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ತಾವು ಹೇಳಿದ ಹಾಗೆ ಭತ್ತದ ಪರ್ಚೇಸ್ ಪ್ರೈಸನ್ನು ಕ್ವಿಂಟಲಿಗೆ ಎರಡು ರೂಪಾಯಿ ಹೆಚ್ಚು ಕೊಡುತ್ತೇವೆಂದು ಈಗಾಗಲೇ ಸಾರಿದ್ದೀರಿ. ಆದರೆ ಜೋಳಕ್ಕೆ ಮೊದಲಿನ ಬೆಲೆಯನ್ನೇ ನಿಗದಿ ಮಾಡಿದ್ದೀರಿ. ಇದಕ್ಕೆ ಕಾರಣವೇನು ? ಮತ್ತು ಭತ್ತಕ್ಕೆ ಹೇಗೆ ಹೆಚ್ಚು ಮಾಡಿದ್ದೀರಿ, ಹಾಗೆಯೇ ಜೋಳಕ್ಕೂ ಹೆಚ್ಚು ಮಾಡುತ್ತೀರಾ ?

ಶ್ರೀ ಬಿ. ವಿಠ್ಠಲ್‌ದಾಸ್ ಶೆಟ್ಟಿ.—ಈಗ ಕೊಟ್ಟಿರತಕ್ಕಂತಹ ದರಕ್ಕೂ ಮಾರ್ಕೆಟ್ ದರಕ್ಕೂ ವ್ಯತ್ಯಾಸವಿಲ್ಲ. ಈ ದರಕ್ಕೆ ರೈತರು ಸಾಕಷ್ಟು ತಂದುಕೊಡುತ್ತಿದ್ದಾರೆ. ಅದನ್ನು ಈಗ ಮುಂದು ವರಿಸಿಕೊಂಡು ಹೋಗುವುದೇ ಕಷ್ಟವಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಮಂತ್ರಿಯವರು ತಜ್ಞರು ಪ್ರೊಡಕ್ಷನ್ ಕಾಸ್ಟನ್ನು ಕಂಡುಹಿಡಿದಿದ್ದಾರೆಂದು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಅವರು ಕಂಡುಹಿಡಿದಿರತಕ್ಕ ಅಂಕಿಅಂಶಗಳನ್ನು ಕೊಡುತ್ತೀರಾ ?

ಶ್ರೀ ಬಿ. ವಿಠ್ಠಲ್‌ದಾಸ್ ಶೆಟ್ಟಿ.—ಕೇಂದ್ರ ಸರ್ಕಾರದ ಅಗ್ರಿಕಲ್ಚರಲ್ ಪ್ರೈಸ್ ಕಮಿಶನ್ನಿನವರು ಒಂದು ಕಮಿಟಿ ಮಾಡಿದ್ದಾರೆ, ಅದರಲ್ಲಿ ಅನೇಕ ತಜ್ಞರಿದ್ದಾರೆ. ಅವರು ಕೂಲಂಕಷವಾಗಿ ವಿವರಿಸಿದ್ದಾರೆ. ಮಾನ್ಯ ಸದಸ್ಯರಿಗೆ ಅಗತ್ಯ ಇದ್ದರೆ ನಾನು ಒಂದು ಕಾಪಿಯನ್ನು ಅವರಿಗೆ ಕಳಿಸಿ ಕೊಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್,—ತಜ್ಞರು ಬೆಲೆ ನಿಗದಿಮಾಡುವ ವಿಷಯವೇನು ಬದುರೆ ಕೊಂಡಿದ್ದಾರೆಂಬುದನ್ನು ನಾನು ಕೇಳಲಿಲ್ಲ ನಾನು ಕೇಳಿದ್ದು ಒಂದು ಕ್ವಿಂಟಾಲ್ ಉತ್ಪನ್ನಕ್ಕೆ ಎಷ್ಟು ಬೆಲೆಯಾಗುತ್ತದೆಂದು.

Sri B. VITHALDAS SETTY.—That aspect has also been taken into consideration.

ಶ್ರೀ ಬಿ. ಎಂ. ಇದಿನಬ್ಬ.—ಈಗ ರಾಜ್ಯದಲ್ಲಿ ಹೆಚ್ಚು ಆಹಾರವನ್ನು ಬೆಳೆಯುವುದರಿಂದ ಬೇಕಾವಷ್ಟು ಉತ್ಪನ್ನವಾಗುತ್ತದೆ. ಉತ್ಪಾದಕರಿಗೆ ನರಿಯಾವ ಬೆಲೆ ಜೋನಲ್ ಸಿಸ್ಟಂನಲ್ಲಿ ಸಿಗುತ್ತದೆ. ಆದ್ದರಿಂದ ಖಾಸ್ತಿಯಾಗಿ ಬೆಳೆಯುವುದರಿಂದ ಉತ್ಪಾದಕರಿಗೆ ಹೆಚ್ಚು ಹಣ ಸಿಗುವುದಿಲ್ಲವೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ನಾನು ಮೊದಲೇ ಹೇಳಿದ್ದೇನೆ. ಸರ್ಕಾರದ ನಿಲುವು ಇದರಲ್ಲಿ ಸ್ಪಷ್ಟವಾಗಿದೆ. ಏನೆಂದರೆ ಜೋನಲ್ ಸಿಸ್ಟಂ ಅವಶ್ಯಕವಿಲ್ಲವೆಂದು. ಇತ್ತೀಚೆಗೆ ಆಹಾರ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಮುಖ್ಯ ಮಂತ್ರಿಗಳ ಸಮ್ಮೇಳನ ಸೇರಿದ್ದಾಗ ಇದರ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಇನ್ನು ಕೆಲವೇ ತಿಂಗಳುಗಳಲ್ಲಿ ಕೇಂದ್ರ ಸರ್ಕಾರದ ಇನ್ನೊಂದು ಸಮ್ಮೇಳನ ನಡೆಯುವುದೆಂದು ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ರೈತರಿಗೆ ನ್ಯಾಯವಾಗಿ ಬರಬೇಕಾದಂಥ ಒಂದು ಬೆಲೆ ಏನಿದೆಯೋ ಅದರ ಬಗ್ಗೆ ನಾಗೆ ಪೂರ್ಣ ಒಮ್ಮತವಿದೆ. ಆದರೆ ಬೆಲೆ ಹೆಚ್ಚುಮಾಡುವುದರಿಂದ ಮಧ್ಯವರ್ತಿ ಜನಗಳು ಲಾಭ ಮಾಡಿಕೊಂಡು ಕನ್ಸ್ಯೂಮರ್ಸ್‌ಗೆ ತೊಂದರೆಯಾಗದಹಾಗೆ ನೋಡಿ ಕೊಳ್ಳುವುದನ್ನು ತಮ್ಮ ಗಮನದಲ್ಲಿಟ್ಟುಕೊಂಡಿದ್ದೀರಾ ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಅವಶ್ಯಕವಾಗಿಟ್ಟುಕೊಂಡಿದ್ದೇವೆ, ಹೊಸ ಸಲಹೆಗಳು ಏನಾದರೂ ಇದ್ದರೆ ದಯವಿಟ್ಟು ಕಳುಹಿಸಿ. ಅವನ್ನು ಕೂಲಂಕಷವಾಗಿ ಪರಿಶೀಲಿಸುತ್ತೇನೆ.

ಶ್ರೀ ಆರ್. ಎಂ. ದೇಸಾಯಿ.—ಸರ್ಕಾರದವರು ಕೊಡತಕ್ಕ ಪ್ರೊಕ್ಯೂರ್‌ಮೆಂಟ್ ರೇಟ್ ಪ್ರಕಾರ ರೈತರು ಬತ್ತ ಕೊಡುತ್ತಾರೆ. ಆದರೆ ಜೋಳದ ಪ್ರೈಸ್ ಪ್ರೊಕ್ಯೂರ್‌ಮೆಂಟ್ ರೇಟ್ ಪ್ರಕಾರ ಒಂದು ಕ್ವಿಂಟಾಲಿಗೆ 25 ರೂಪಾಯಿಗಳಾಗುತ್ತದೆ. ಆದ್ದರಿಂದ ಅವರಿಗೂ ಇನ್ನೂ ಹೆಚ್ಚು ಪ್ರೈಸ್ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಈ ಪ್ರೈಸ್ ವಿಚಾರ ಎಷ್ಟು ದರದಲ್ಲಿ ಕೊಡಬೇಕೆಂಬುದು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ನಾಗಪ್ಪ.—ಒಂದು ಕಮಿಷನ್ನಿನವರು ಉತ್ಪಾದನಾ ಬೆಲೆಯ ಬಗ್ಗೆ ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆಂದು ಹೇಳಿದ್ದಿರಿ. ಪ್ರತಿಯೊಂದು ರಾಜ್ಯದಲ್ಲಿಯೂ ಬೇರೆ ಬೇರೆ ಉತ್ಪಾದನಾ ಬೆಲೆ ಇದೆಯೆಂದು ಅವರು ಅವರ ವರದಿಯಲ್ಲಿ ಕೊಟ್ಟಿದ್ದಾರೆಯೇ ? ಅಥವಾ

(ಶ್ರೀ ಎಂ. ನಾಗಪ್ಪ)

ಬೊಂಬಾಯಿನಲ್ಲಿ ಕೊಟ್ಟಿದ್ದರೆ ಅದನ್ನು ಯಾವ ದೃಷ್ಟಿಯಿಂದ ಕೊಟ್ಟಿದ್ದಾರೆ ಎಂಬುದನ್ನು ತಿಳಿಸುತ್ತೀರಾ? ಹಾಗಿದ್ದರೆ ಜೋಳ ಮತ್ತು ಬತ್ತಕ್ಕೆ ಅವರು ಉತ್ಪಾದನಾ ಬೆಲೆ ಎಷ್ಟೆಂದು ತೋರಿಸಿದ್ದಾರೆ?

ಶ್ರೀ ವಿಠ್ಠಲದಾಸಶೆಟ್ಟಿ.—ನಮ್ಮ ರಾಜ್ಯದಲ್ಲಿ ಒಂದೆರಡು ಜಿಲ್ಲೆಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಸ್ಪೆಷಲ್ಲಾಗಿ ಕೂರ್ಗ್ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳೆಂದು ನನಗೆ ಕಾಣುತ್ತದೆ. ಆದರೆ ಇನ್ನೂ ಬೇಕಾದ ಮಾಹಿತಿ ನನ್ನಲ್ಲಿಲ್ಲ. ತಮಗೆ ಅವಶ್ಯಕವಿದ್ದರೆ, ಇಂತಿಂಥ ಪ್ರದೇಶಗಳಲ್ಲಿ ಈ ರೀತಿ ಬೆಲೆ ಇದೆಯೆಂಬುವನ್ನು ಅಲ್ಲಿನ ತಜ್ಞರು ಬೇಕಾದಷ್ಟು ಹೇಳಿದ್ದಾರೆ. ಅದನ್ನು ಒದಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ.—ಉತ್ಪಾದನೆಯ ಬೆಲೆಯ ಖರ್ಚಿನ ಬಗ್ಗೆ ತಜ್ಞರು ಕಂಡು ಹಿಡಿದಿದ್ದಾರೆಂದು ಮಂತ್ರಿಗಳು ಹೇಳಿದರು. ನಿಜವಾಗಿ ಜಮೀನಿನಲ್ಲಿ ವ್ಯವಸಾಯಮಾಡತಕ್ಕವರು ತಜ್ಞರೇ ಅಥವಾ ಪುಸ್ತಕಗಳನ್ನು ಓದಿತಕ್ಕ ಡಿಗ್ರಿಹೋಲ್ಡರ್ಸ್ ತಜ್ಞರೇ? ಯಾರು ತಜ್ಞರು ಎಂಬುದನ್ನು ಹೇಳುತ್ತೀರಾ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಇಲ್ಲಿ ಪುಸ್ತಕದಲ್ಲಿ ಓದಿರತಕ್ಕವರು ಮತ್ತು ಭೂಮಿಯಲ್ಲಿ ವ್ಯವಸಾಯ ಮಾಡತಕ್ಕವರ ಪ್ರಶ್ನೆಯಲ್ಲ. ಈ ಎಂದನ್ನೂ ಒಟ್ಟಿಗೆ ಯೋಡನೆಮಾಡಿ ಅದಕ್ಕಾಗಿ ಒಂದು ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಇದೆ. ಅಲ್ಲಿ ಇವೆರಡನ್ನೂ ಕಲಿಸಿ ನಮ್ಮ ವಿದ್ಯಾರ್ಥಿಗಳಿಗೆ ಡಿಗ್ರಿಗಳನ್ನು ಕೊಡುತ್ತಾರೆ. ಅಲ್ಲಿಯೇ ಕಂಡುಹಿಡಿಯುತ್ತಾರೆ. ಆದ್ದರಿಂದ ಪುಸ್ತಕದಲ್ಲಿ ಓದಿರುವವರೇ ಆಗಲೀ ಅಥವಾ ವ್ಯವಸಾಯ ಮಾಡುವವರಾಗಲೀ ಯಾರೂ ಆ ಪ್ರೈಸ್ ಕಂಡುಹಿಡಿಯುವುದಕ್ಕಾಗುವುದಿಲ್ಲ.

Sri H. SIDDAVEERAPPA.—I would like to know from the Government how many quintals of food grains they have purchased in pursuance of their price support policy this year?

Sri B. VITHALDAS SETTY.—If the hon. Member puts a separate question, I will be able to furnish figures.

ಶ್ರೀ ಜಿ. ರಾಮೇಗೌಡ.—ತಮಗೆ ಆಹಾರಧಾನ್ಯಗಳ ಉತ್ಪತ್ತಿ ಜಾಸ್ತಿಯಾಗಿದೆಯೆಂದು ಹೇಳಿದ್ದೀರಿ. ಬೆಂಗಳೂರು ಜಿಲ್ಲೆಗೆ ಎಷ್ಟು ಇಂಪೋರ್ಟೆಡ್ ಧಾನ್ಯಗಳನ್ನು ಉಪಯೋಗಿಸುತ್ತಿದ್ದೀರಿ? ಅದನ್ನು ನಿಲ್ಲಿಸಿದರೆ ಹೆಚ್ಚಿಗೆ ಬೆಳೆಯುತಕ್ಕ ಧಾನ್ಯಗಳನ್ನು ಇಲ್ಲಿಯೇ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಬೆಂಗಳೂರಿನಲ್ಲಿ ನಾವು ಈಗ ಎಷ್ಟು ಉಪಯೋಗಮಾಡುತ್ತಿದ್ದೇವೆಂದು ಹೇಳುವುದಕ್ಕೆ ಒಂದು ದೊಡ್ಡ ಪಟ್ಟಿಯೇ ಇದೆ. ಅದನ್ನು ಮಾನ್ಯ ಸದಸ್ಯರ ಅವಗಾಹನೆಗಾಗಿ ಈ ಸಭೆಯಮುಂದೆ ಇಡುತ್ತೇನೆ.

Revenue Pockets in Bangalore City Corporation Limits

511. **Sri T. R. SHAMANNA (Fort).**—

Will the Minister of State for Municipal Administration be pleased to state.—

(*a*) whether the Bangalore City Corporation is aware that there are many Revenue Pockets existing within the Corporation limits which are not taxed though they are enjoying all the facilities from the Corporation;